# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ-580025
ನ್ಯಾಕ 'ಎ' ಶ್ರೇಣಿ ಮಾನ್ಯತೆ

ಪರೀಕ್ಷಾ ವಿಭಾಗ

ನಂ: ಕರಾಕಾವಿ/ಪರೀಕ್ಷಾ/2026-27/178 ದಿನಾಂಕ: 29-04-2026

## ಸುತ್ತೋಲೆ

ವಿಷಯ:2018-19 ರಿಂದ 2023-24ನೇ ಸಾಲಿನವರೆಗಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿರುವ ಕುರಿತು.
1) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17-04-2026

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಹಾಗೂ ಪ್ರಾಚಾರ್ಯರು ಇವರು 2018-19 ರಿಂದ 2022-23ನೇ ಸಾಲಿನಲ್ಲಿ ಆಂತರಿಕ ಪರೀಕ್ಷೆಗಳ ಬರೆಯಲು ಅನಾನೂಕಲತೆ ಹಾಗೂ ಅನಾರೋಗ್ಯ ದೃಷ್ಟಿಯಿಂದ ಹಾಜರಾಗದ ಮತ್ತು ಒಂದು ಅಂಕದಿಂದ ಏಳು ಅಂಕಗಳನ್ನು ಪಡೆದು ಅನುತೀರ್ಣರಾದ ಕಾರಣ ವಿದ್ಯಾರ್ಥಿಗಳು ತಮ್ಮ ಆಂತರಿಕ ಅಂಕಗಳ ಪರೀಕ್ಷೆಗೆ ಪುನಃ ಹಾಜರಾಗಲು ಮನವಿಗಳನ್ನು ಸಲ್ಲಿಸಿರುತ್ತಾರೆ. ಈ ಹಿನ್ನಲೇಯಲ್ಲಿ ಪರಿಶೀಲಿಸಲಾಗಿ ಈಗಾಲೆ 80-20 ಅಂಕಗಳ ಮಾದರಿಯ ಪರೀಕ್ಷೆಯ ಪದ್ಧತಿಯನ್ನು ವಿಶ್ವವಿದ್ಯಾಲಯವು ಹಿಂಪಡೆದು, ಈಗ 100 ಅಂಕಗಳ ಮಾದರಿಯನ್ನು 2024-25ನೇ ಸಾಲಿನ ವಿದ್ಯಾರ್ಥಿಗಳಿಗೆ ಅನ್ವಹಿಸಿರುತ್ತದೆ. ಆದರಿಂದ 2018-19 ರಿಂದ 2023-2024ನೇ ಸಾಲಿನ ವಿದ್ಯಾರ್ಥಿಗಳು 80-20 ಅಂಕಗಳ ಮಾದರಿಯಲ್ಲಿ ಆಂತರಿಕ ಪರೀಕ್ಷೆಗೆ ಹಾಜರಾಗದ ಮತ್ತು ಒಂದು ಅಂಕದಿಂದ ಏಳು ಅಂಕ ಪಡೆದು ಆಂತರಿಕ ಪರೀಕ್ಷೆಯಲ್ಲಿ ಅನುತೀರ್ಣರಾದಂತಹ ವಿದ್ಯಾರ್ಥಿಗಳಿಗೆ ಮಾನ್ಯ ಕುಲಪತಿಗಳು ಕೊನೆಯ ಅವಕಾಶವನ್ನು ಕಲ್ಪಿಸಿದ್ದು, ಸದರಿ ವಿಷಯವನ್ನು ಪ್ರಾಚಾರ್ಯರು ವಿದ್ಯಾರ್ಥಿಗಳ ಗಮನಕ್ಕೆ ತಂದು ಆಂತರಿಕ ಪರೀಕ್ಷೆಯನ್ನು ಬರೆಯಿಸಿ, ಮುಂಬರುವ 2025-26ನೇ ಸಾಲಿನ ಸಮ ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಸಲ್ಲಿಸುವ ಆಂತರಿಕ ಅಂಕಗಳೊಂದಿಗೆ ಮೇಲೆ ತಿಳಿಸಿದ ಸಾಲಿನ ವಿದ್ಯಾರ್ಥಿಗಳ ಅಂಕಗಳನ್ನು ಸದರಿ ಒಂದು ವಿಷಯಕ್ಕೆ ರೂ. 1000/- (ಒಂದು ಸಾವಿರ ರೂಪಾಯಿ)ಗಳಂತೆ ದಂಡವನ್ನು ವಿಶ್ವವಿದ್ಯಾಲಯದ ಖಾತೆ (Fine and Penalty) ಹೆಡ್‌ಗೆ ಭರಣ ಮಾಡಿ ಸಂಬಂಧ ಪಟ್ಟ ಧಾಖಲಾತಿಗಳೊಂದಿಗೆ ದಂಡಪಾವತಿಸಿದ ವಿವರವನ್ನು ಈ ಕೆಳಗಿನ ನಮೂನೆಯಲ್ಲಿ ಭರ್ತಿಮಾಡಿ ಪಾವತಿಸಿದ ರಶೀದಿಗಳ ನಕಲು ಪ್ರತಿಗಳೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ಕ.ರಾ.ಕಾ.ವಿ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳ ಪ್ರಾಚಾರ್ಯರರಿಗೆ ಈ ಮೂಲಕ ತಿಳಿಸಲಾಗಿದೆ.

| Sl.No. | Name of the College | Total Number of Subject | Payment Details | |
|---|---|---|---|---|
| | | | Receipt No./Date | Amount |
| 1 | | | | |

ಮುಂದುವರೆದು ಸದರ ಆಂತರಿಕ ಅಂಕಗಳನ್ನು ವಿದ್ಯಾರ್ಥಿಗಳು ಮತ್ತು ಪ್ರಾಚಾರ್ಯರರ ಮನವಿ ಮೇರೆಗೆ ಅವಕಾಶವನ್ನು ಕಲ್ಪಿಸಲಾಗಿದೆ ವಿನಃ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಉತ್ತಮಗೊಳಿಸುವ (Improvement of Internal Assessment Marks) ಕುರಿತು ಇರುವುದಿಲ್ಲವೆಂದು ತಿಳಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ) ಪ್ರಭಾರ

ಗೆ,
ಪ್ರಾಚಾರ್ಯರು
ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳು
ಕ.ರಾ.ಕಾ.ವಿ
ಹುಬ್ಬಳ್ಳಿ-25